3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಬೆಂಗಳೂರು ನಗರ

ಸಿ.ಸಿ.ನಂ.5353/2020

ಫಿರ್ಯಾದಿದಾರರ ಹೆಸರುಃ ರಾಜ್ಯ ಸರ್ಕಾರದ ಪರವಾಗಿ ಅಶೋಕ ನಗರ ಆರಕ್ಷಕ ಠಾಣೆ, ಬೆಂಗಳೂರು.

ವಿರುದ್ಧ

ಆರೋಪಿ ಹೆಸರುಃ ಶ್ರೀ ಕಿಶೋರ್ ಕಿರಣ್ ಕೆ @ ಕಿಶೋರ್ ಕಿರಣ್ ಕೆ
ಬಿನ್ ಕರುಣಾಕರನ್ ,
ವಯಸ್ಸು 21 ವರ್ಷ ,
ವಾಸ ನಂ.76, ಎಫ್ ಬ್ಲಾಕ್ ,
ಬಂಗಾರಪೇಟೆ ,
ಚಾಂಪಿಯನ್ ರೀಫ್ಸ್ ,
ಕೋಲಾರ – 563 117.

**ದೋಷಾರೋಪಣೆ**

ಬೆಂಗಳೂರಿನ 3ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ಸಿದ್ದರಾಮ ಎಸ್ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವ ಆರೋಪಿಯಾದ ನೀವು ದಿನಾಂಕ 21.10.2017 ರಿಂದ ದಿನಾಂಕ 10.05.2018 ರ ವರೆಗೆ ಸಾಕ್ಷಿ-1 ಮತ್ತು ಸಾಕ್ಷಿ-2 ರವರ ಅಧೀನದಲ್ಲಿರುವ ಲಿಬರ್ಟಿ ಜನರಲ್ ಇನ್ಸುರೆನ್ಸ್ ಕಂಪನಿಯಲ್ಲಿ ಡಾಟಾ ಎಂಟ್ರಿ ಸಪೋರ್ಟ್ ಆಗಿ ಕೆಲಸ ಮಾಡುತ್ತಿದ್ದು ಸಾಕ್ಷಿ-3 ರಿಂದ ಸಾಕ್ಷಿ-9 ರವರಿಂದ ದ್ವಿಚಕ್ರ ವಾಹನಗಳ ವಿಮಾ ಪಾಲಿಸಿಗಳನ್ನು ನವೀಕರಿಸಲು ಒಟ್ಟು ರೂ.11,913/- ಗಳನ್ನು ಪಡೆದುಕೊಂಡು ಸದರಿ ಹಣವನ್ನು ಕಂಪನಿಗೆ ಜಮಾ ಮಾಡದೇ ನಿಮ್ಮ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡು ಕಂಪನಿಗೆ ಅಕ್ರಮ ನಷ್ಟವನ್ನುಂಟು ಮಾಡಿ ಕಂಪ್ಯೂಟರ್ ನಲ್ಲಿ ನಕಲಿ ವಿಮಾ ಪಾಲಿಸಿ ಪತ್ರಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು

ನೈಜ ವಿಮಾ ಪಾಲಿಸಿ ಪತ್ರಗಳೆಂದು ಸಾಕ್ಷಿ-3 ಹಾಗೂ ಸಾಕ್ಷಿ-5 ರಿಂದ ಸಾಕ್ಷಿ-9 ರವರಿಗೆ ನೀಡಿ ನಂಬಿಕೆ ದ್ರೋಹವೆಸಗಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.408 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದಂತೆ, ಆರೋಪಿಯಾದ ನೀವು ಸಾಕ್ಷಿ-3 ರಿಂದ ಸಾಕ್ಷಿ-9 ರವರಿಂದ ದ್ವಿಚಕ್ರ ವಾಹನಗಳ ವಿಮಾ ಪಾಲಿಸಿಗಳನ್ನು ನವೀಕರಿಸಲು ಒಟ್ಟು ರೂ.11,913/- ಗಳನ್ನು ಪಡೆದುಕೊಂಡು ಸದರಿ ಹಣವನ್ನು ಕಂಪನಿಗೆ ಜಮಾ ಮಾಡದೇ ಇದ್ದರೆ ಕಂಪನಿಗೆ ಆರ್ಥಿಕ ನಷ್ಟ ಉಂಟಾಗುತ್ತದೆಂದು ತಿಳಿದಿದ್ದರೂ ಸಹ ಸದರಿ ಹಣವನ್ನು ಕಂಪನಿಗೆ ಜಮಾ ಮಾಡದೇ ನಿಮ್ಮ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡು ಕಂಪನಿಗೆ ಅಕ್ರಮ ನಷ್ಟವನ್ನುಂಟು ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.418 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಮೂರನೇಯದಾಗಿ, ಮೇಲೆ ಹೇಳಿದಂತೆ, ಆರೋಪಿಯಾದ ನೀವು ವಂಚಿಸುವ ಉದ್ದೇಶದಿಂದ ಸಾಕ್ಷಿ-3 ರಿಂದ ಸಾಕ್ಷಿ-9 ರವರಿಂದ ದ್ವಿಚಕ್ರ ವಾಹನಗಳ ವಿಮಾ ಪಾಲಿಸಿಗಳನ್ನು ನವೀಕರಿಸಲು ಒಟ್ಟು ರೂ.11,913/- ಗಳನ್ನು ಪಡೆದುಕೊಂಡು ಸದರಿ ಹಣವನ್ನು ಕಂಪನಿಗೆ ಜಮಾ ಮಾಡದೇ ನಿಮ್ಮ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡು ಕಂಪನಿಗೆ ಅಕ್ರಮ ನಷ್ಟವನ್ನುಂಟು ಮಾಡಿ ಕಂಪ್ಯೂಟರ್ ನಲ್ಲಿ ನಕಲಿ ವಿಮಾ ಪಾಲಿಸಿ ಪತ್ರಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ನೈಜ ವಿಮಾ ಪಾಲಿಸಿ ಪತ್ರಗಳೆಂದು ಸಾಕ್ಷಿ-3 ಹಾಗೂ ಸಾಕ್ಷಿ-5 ರಿಂದ ಸಾಕ್ಷಿ-9 ರವರಿಗೆ ನೀಡಿ ವಂಚಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.420 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ನಾಲ್ಕನೇಯದಾಗಿ, ಮೇಲೆ ಹೇಳಿದಂತೆ, ಆರೋಪಿಯಾದ ನೀವು ಸಾಕ್ಷಿ-3 ರಿಂದ ಸಾಕ್ಷಿ-9 ರವರಿಂದ ದ್ವಿಚಕ್ರ ವಾಹನಗಳ ವಿಮಾ ಪಾಲಿಸಿಗಳನ್ನು ನವೀಕರಿಸಲು

ಒಟ್ಟು ರೂ.11,913/- ಗಳನ್ನು ಪಡೆದುಕೊಂಡು ಕಂಪ್ಯೂಟರ್ ನಲ್ಲಿ ನಕಲಿ ವಿಮಾ ಪಾಲಿಸಿ ಪತ್ರಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ನೈಜ ವಿಮಾ ಪಾಲಿಸಿ ಪತ್ರಗಳೆಂದು ಸಾಕ್ಷಿ-3 ಹಾಗೂ ಸಾಕ್ಷಿ-5 ರಿಂದ ಸಾಕ್ಷಿ-9 ರವರಿಗೆ ನೀಡಿ ನಂಬಿಕೆ ದ್ರೋಹವೆಸಗಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.465 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಐದನೇಯದಾಗಿ, ಮೇಲೆ ಹೇಳಿದಂತೆ, ಆರೋಪಿಯಾದ ನೀವು ಸಾಕ್ಷಿ-3 ರಿಂದ ಸಾಕ್ಷಿ-9 ರವರಿಂದ ದ್ವಿಚಕ್ರ ವಾಹನಗಳ ವಿಮಾ ಪಾಲಿಸಿಗಳನ್ನು ನವೀಕರಿಸಲು ಒಟ್ಟು ರೂ.11,913/- ಗಳನ್ನು ಪಡೆದುಕೊಂಡು ಕಂಪ್ಯೂಟರ್ ನಲ್ಲಿ ನಕಲಿ ವಿಮಾ ಪಾಲಿಸಿ ಪತ್ರಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ಸಾಕ್ಷಿ-3 ಹಾಗೂ ಸಾಕ್ಷಿ-5 ರಿಂದ ಸಾಕ್ಷಿ-9 ರವರಿಗೆ ನೀಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.468 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಆರನೇಯದಾಗಿ, ಮೇಲೆ ಹೇಳಿದಂತೆ, ಆರೋಪಿಯಾದ ನೀವು ಸಾಕ್ಷಿ-3 ರಿಂದ ಸಾಕ್ಷಿ-9 ರವರಿಂದ ದ್ವಿಚಕ್ರ ವಾಹನಗಳ ವಿಮಾ ಪಾಲಿಸಿಗಳನ್ನು ನವೀಕರಿಸಲು ಒಟ್ಟು ರೂ.11,913/- ಗಳನ್ನು ಪಡೆದುಕೊಂಡು ಕಂಪ್ಯೂಟರ್ ನಲ್ಲಿ ನಕಲಿ ವಿಮಾ ಪಾಲಿಸಿ ಪತ್ರಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ನೈಜ ವಿಮಾ ಪಾಲಿಸಿ ಪತ್ರಗಳೆಂದು ಸಾಕ್ಷಿ-3 ಹಾಗೂ ಸಾಕ್ಷಿ-5 ರಿಂದ ಸಾಕ್ಷಿ-9 ರವರಿಗೆ ನೀಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.471 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಮೇಲೆ ಹೇಳಿದ ದೋಷಾರೋಪಣೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

**ಪ್ರಃ1** ನಿಮ್ಮ ಮೇಲಿನ ಆಪಾದನೆ ತಿಳಿಯಿತೆ ?

**ಉಃ**

**ಪ್ರಃ2** ನಿಮ್ಮ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

**ಉಃ**

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ).

ದಿನಾಂಕಃ27.11.2025

3ನೇ ಎ.ಸಿ.ಜೆ.ಎಂ., ನ್ಯಾಯಾಲಯ,
ಬೆಂಗಳೂರು.